‘ನಾನು ನೆಲೆಸಿರುವುದು ಈಗ ಅಪ್ಪನ ಜೊತೆಗಲ್ಲ!’

‘ಕಾರಣ?’

‘ಅಪ್ಪನಿಗೆ ಪ್ರಮೋಷನ್ ಸಿಕ್ಕಿತು. ತುಂಬಾ ಮೊತ್ತದ ಹಣವೂ. ಮತ್ತೆ ಅಪ್ಪ ಮತ್ತೊಂದು ಮದುವೆಯಾದರು.’

‘ಆಗಬಹುದು!’

ಮತ್ತೆ ಅವಳು ಪಿಸುಗುಟ್ಟಿದಳು: ‘ತಮಗೆ ಶಿಕ್ಷೆಯಾದ ಕೂಡಲೇ ನಾನು ಮ್ಯಾಜಿಸ್ಟ್ರೇಟರ ಎದುರು ಹಾಜರಾದೆ. ನಾನು ಅಪರಾಧಿಯೆಂದು ಹೇಳಿದರು. ನನ್ನನ್ನು ಅರೆಸ್ಟ್ ಮಾಡಿ ಶಿಕ್ಷೆ ನೀಡಲು ನಾನು ಬೇಡಿಕೆಯಿರಿಸಿದೆ!’

‘ಮುಗ್ಧ ಹೆಣ್ಣೆ. ಮತ್ತೆ?’

‘ನನಗೆ ಹುಚ್ಚೆಂದು ಅಪ್ಪ ಹೇಳಿದರು. ಎಲ್ಲರೂ ಹೇಳಿದರು. ನನಗೆ ಹುಚ್ಚೆಂದು... ಅದೆಲ್ಲ ಪತ್ರಿಕೆಗಳಲ್ಲಿಯೂ ಬಂತು.’

‘ಆಗಬಹುದಲ್ಲ. ಹುಚ್ಚಿ! ಹಾಗಾಗಿ?’

‘ನನಗೆ ಆರಾಮವಿಲ್ಲದಾಯಿತು. ಚಿಕ್ಕಮ್ಮನ ಜೊತೆ ವಾಸ ಮಾಡುತ್ತಿದ್ದೆ. ಆಗ ಅಮ್ಮನೂ ಬಂದಳು.’

‘ಯಾವ ಅಮ್ಮ?’

ಮಂದಹಾಸ ಬೀರುವ ಜಗದೀಶನ ಅಮ್ಮನ ಫೋಟೊವನ್ನು ಅವಳು ಬೆಟ್ಟು ಮಾಡಿ ತೋರಿದಳು.

ಆತ ಕೇಳಿದ:

‘ನೀವೆಲ್ಲ ಆಗಲೇ ಸ್ನೇಹಿತರಾಗಿ ಬಿಟ್ಟಿದ್ದೀರಿ, ಅಲ್ಲವೇ!’

ಅವಳು ತಲೆಬಾಗಿದಳು. ಆತ ಆ ತಲೆಯನ್ನು ನೇವರಿಸುತ್ತ ಮುಂದುವರಿಸಿದ:

‘ಹಾಗಾಗಿ ಅಮ್ಮ ಇನ್ನಾವುದನ್ನೂ ಹೇಳಲಿಲ್ಲವಲ್ಲ!’

ಭಾರ್ಗವಿ ಕೇಳಿದಳು: ‘ಜೈಲಿನಲ್ಲಿ ತೊಂದರೆ ಕೊಟ್ಟರೇನು?’

‘ಜೈಲಿನಲ್ಲಿ ವಿಶೇಷವಾಗಿ ಏನೂ ಇರಲಿಲ್ಲ. ಲಾಕಪ್ಪಿನಲ್ಲಿ...’

‘ಲಾಕಪ್ಪಿನಲ್ಲಿ?’

‘ಹಾಂ. ಪರವಾಯಿಲ್ಲ... ಹಲವು ಗಂಟೆಗಳವರೆಗೆ ಪೆಟ್ಟು, ಗುದ್ದು, ಒದೆ, ಬೈಗುಳಗಳು. ಜೊತೆಗಾರರ ಹೆಸರುಗಳನ್ನು ಕೇಳಿದರು. ಹೇಳದೆ ಇರುವಾಗ ಉಗುರುಗಳ ಕೆಳಗಿನ ಮಾಂಸಲ ಭಾಗದಲ್ಲಿ ಗುಂಡುಸೂಜಿಗಳಿಂದ ಚುಚ್ಚುತ್ತಿದ್ದರು. ನೀರು ಕೇಳಿದಾಗ ಕೊಟ್ಟ ಮೂತ್ರವನ್ನು ಕುಡಿಯದ ಕಾರಣ ಮತ್ತೆ ಗುಂಡುಸೂಜಿಗಳಿಂದ ಚುಚ್ಚುತ್ತಿದ್ದರು. ಕೊನೆಗೆ ಪ್ರಜ್ಞೆತಪ್ಪಿ ಬೀಳುವುದಿದ್ದೇ ಇದೆಯಲ್ಲ.’

ಅವಳ ಮುಖ ಬಿಳಿಚಿತು. ಆತ ಸಮಾಧಾನ ಪಡಿಸಿದ. ‘ಚಿನ್ನಾ, ಅದೆಲ್ಲ ಪೊಲೀಸ್ ಲಾಕಪ್ಪುಗಳಲ್ಲಿ ಸಾಮಾನ್ಯವಲ್ಲವೇ!’

ಅಂದು ರಾತ್ರಿ ಅವನ ಅಮ್ಮ ಆಸೆ ವ್ಯಕ್ತಪಡಿಸಿದರು.

‘ನೀನು ಮದುವೆಯಾಗುವುದನ್ನು ನೋಡಿ ನಾನು ಸಾಯುವುದು ಸಾಧ್ಯವೇ?’

‘ಇದೇ ಏನಮ್ಮ ನೀನು ನನ್ನಲ್ಲಿ ಹೇಳುವುದಕ್ಕಿರುವ ಅಗತ್ಯದ ವಿಷಯ?’

‘ಹೌದು.’

‘ಆಗಬಹುದಲ್ಲ. ಹುಡುಗಿ ಯಾರು?’

ಆ ಅಮ್ಮ ಹಲವು ಯುವತಿಯರ ಕುರಿತು ಹೇಳಿದರು. ನೆರೆಮನೆಗಳಲ್ಲಿರುವ ಹೆಣ್ಣುಮಕ್ಕಳ ಗುಣವರ್ಣನೆಗಳನ್ನು ಮಾಡಿದರು. ತುಂಬಾ ಹೆಸರುಗಳನ್ನು ಹೇಳಿದರು.